<table>
<tr><td colspan="3">ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 2623/2023</td></tr>
<tr><td></td><td>ಸಿ.ಡಬ್ಲೂ</td><td>7</td></tr>
<tr><td></td><td>ಪಿ.ಡಬ್ಲೂ</td><td>4</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ಸುನೀಲ್ ಕುಮಾರ್ ಬಿನ್ ಜಗದೀಶ್</td></tr>
<tr><td>ವಯಸ್ಸು</td><td colspan="3">30 ವರ್ಷ</td></tr>
<tr><td>ಉದ್ಯೋಗ</td><td colspan="3">ಖಾಸಗಿ ಕೆಲಸ</td></tr>
<tr><td>ವಾಸಸ್ಥಳ</td><td colspan="3">ಚನ್ನಪಟ್ಟಣ</td></tr>
</table>

ದಿನಾಂಕ **11.08.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

1) ಸಾಕ್ಷಿಯು ದಿ:**11.04.2023** ರಂದು ಮಾಡಲಾದ ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ.**5** ಎಂದು, ಸಾಕ್ಷಿಯ ಸಹಿಯನ್ನು ನಿಪಿ.**5**(ಎ) ಎಂದು ಗುರುತಿಸಲಾಯಿತು. ನಿಪಿ.**5** ಕ್ಕೆ ಗ್ರಾಮಾಂತರ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆಗ ಸಮಯ ಸಂಜೆ **06** ರಿಂದ **06.30** ಆಗಿತ್ತು. ಆ ವೇಳೆಗೆ ನನ್ನ ಜೊತೆ ಸಾದಿಕ್ ಮತ್ತು ವಸಂತ್ ಹಾಜರಿದ್ದರು. ರೂ. **1,29,000/-** ಹಣ ಮತ್ತು ಬುಲೆರೋ ವಾಹನ ಬಿಡುಗಡೆ ವಿಚಾರವಾಗಿ ಸಹಿಯನ್ನು ಪಡೆದರು. ಆ ವೇಳೆಗೆ ಭಾವಚಿತ್ರ ತೆಗೆದರೇ ಎಂಬ ಬಗ್ಗೆ ನನಗೆ ನೆನಪಿಲ್ಲ.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೋರಿದ್ದು, ಕೋರಿಕೆಯ ಮೇರೆಗೆ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲು:- ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

1) ಪಂಚನಾಮೆ ಕಾಲಕ್ಕೆ ಪೋಲಿಸರು ನಿಪಿ.**3** ಮತ್ತು **4** ರ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿ. ಹಣ ಬಿಡುಗಡೆ ಕಾಲಕ್ಕೆ ತೆಗದ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.**6** ಎಂದು ಗುರುತಿಸಲಾಯಿತು.

**ಮರು ವಿಚಾರಣೆ:- ಇಲ್ಲ.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್.ಬಿ.ಎ ವಕೀಲರಿಂದಃ</u>**

1) ನಿಪಿ.**5** ರ ಪಂಚನಾಮೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ**.** ನನಗೆ ಪೊಲೀಸರು ಯಾವ ವಿಚಾರವಾಗಿ ಸಹಿ ಪಡೆದರು ಎಂದು ಸರಿಯಾಗಿ ತಿಳಿದಿಲ್ಲ**.** ಪೋಲೀಸರ ಕೋರಿಕೆಯ ಮೇರೆಗೆ ನಿಪಿ.**5** ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ**.**

**ಮರು ವಿಚಾರಣೆಃ- ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು**)**

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ.